


ಲೋಕದ ಸುಖಕ್ಕಾಗಿ ಮೊಳೆ ಹೊಡೆಸಿಕೊಂಡ
ಯೇಸುವಿನಂತೆ
ಹಸಿದ ಅನ್ನಕ್ಕೆ ಬೆಲೆ ಕೊಟ್ಟು ವಿಷವುಂಡ ಬುದ್ಧನಂತೆ
ಸತ್ಯದ ಉಸಿರನ್ನು ಉಳಿಸಲು
ತನ್ನುಸಿರ ಚೆಲ್ಲಿದ ಸಾಕ್ರೆಟಿಸನಂತೆ
ಯಾವ ಪ್ರಶಸ್ತಿಗಳಿಗಾಗಿಯೂ ನಿರೀಕ್ಷಿಸದೆ
ದುಡಿಯುತ್ತಿರುವ ಎರೆಹುಳದ ಹಾಗೆ
ಈ ಗೋಡೆಗಳು ಹಾಗೆಯೇ ಎಂದು ಭಾವಿಸಿದ್ದು ತಪ್ಪು
ಏಕೆಂದರೆ ಈ ಗೋಡೆಗಳು
ಗಾಳಿಯನುಂಡು ಗಾಳಿಯನೇ ಹೊರಚೆಲ್ಲುವ
ಮೊಬೈಲ್ ನೆಟ್ವರ್ಕ್‌ನ ಟವರ್‌ಗಳ ಹಾಗೆ
ಯಾವುದೋ ಕಂಪನಿಯ ಲೇಬಲ್ಲುಗಳ ಹೊತ್ತು ನಿಂತಿವೆ

ಹೀಗೆ ಬದಲಾದದ್ದು ಗೋಡೆಗಳು ಮಾತ್ರವೇ
ಅಥವಾ ನಾನು?
ಈಗ ಎಲ್ಲವೂ ಬದಲಾಗುವ ಕಾಲ
ಬದಲಾವಣೆಯ ಬಯಲಾಟದಲ್ಲಿ
ತ್ರಿಕರಣಗಳು ಕೊರಳಿಗೆ ಹಾಕಿದ ನೇಣಿನ ಹಾರವನ್ನು ನೋಡಿ
ಹಬ್ಬಕ್ಕೆ ತಂದ ಕುರಿ ತಳಿರ ಮೇಯುವ ಹಾಗೆ
ಚಾಟಿ ಹಿಡಿದು ಮೈಗೆ ಬಡಿದುಕೊಳ್ಳುವ
ದುರ್ಗಾಮುರ್ಗಿಯವರ ಹಾಗೆ 'ನಾನು'
ಕೇಳಿಸಿಕೊಳ್ಳುತ್ತಲೇ ಇರುವ ಗೋಡೆಗಳ ಮುಂದೆ...